**ದಿಃ10.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

ಪಾಟೀ ಸವಾಲು:- ಆರೋಪಿ ಪರ H.H., ವಕೀಲರಿಂದಃ-

ನನ್ನ ಹೆಸರಿಗೆ ಒಟ್ಟು ಎರಡು ಬ್ಯಾಂಕ್ ನಲ್ಲಿ ಖಾತೆ ಇರುತ್ತವೆ . ಅವುಗಳು HDFC, Bank ಮತ್ತು ಕೆನರಾ ಬ್ಯಾಂಕ್ ಜಗಳೂರು ಇರುತ್ತವೆ . ಆರೋಪಿಯ ಈ ಹಿಂದೆ ನನ್ನ ಕೆನರಾ ಬ್ಯಾಂಕ್ ಖಾತೆಗೆ ರೂ.**98,000/-** ಹಣವನ್ನು ಜಮೆ ಮಾಡಿರುತ್ತಾರೆ **.** ಸಾಕ್ಷಿ ಮುಂದುವರೆಸಿ ಅದೇ ಬೇರೇ ವ್ಯವಹಾರ ಇದೇ ಬೇರೆ ವ್ಯವಹಾರ ಎಂದು ಹೇಳುತ್ತಾರೆ **.** ನಾನು ಆರೋಪಿಗೆ ಹಣ ಜಮೆ ಮಾಡಲು ನನ್ನ ಕೆನರಾ ಬ್ಯಾಂಕಿನ ಖಾತೆಯ ವಿವರ ಮತ್ತು ನನ್ನ ಫೋನ್ ಫೇ ಸಂಖ್ಯೆಯ ವಿವರಗಳನ್ನು ನೀಡಿರುತ್ತೇನೆ **.** ನನ್ನ ಕೆನರಾ ಬ್ಯಾಂಕಿ ಮತ್ತು **HDFC** ಬ್ಯಾಂಕ್ ನ ಖಾತೆಗೆ ಸಂಬಂದಿದ ಹಾಗೆ ದಿಃ **01.08.2024** ರಿಂದ **01.01.2025** ರವರೆಗೂ ಬ್ಯಾಂಕ್ ಸ್ಟೇಟ್ ಮೆಂಟ್ ಅನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ **.** ಆರೋಪಿಯ ಹೆಂಡತಿ ಗೋಸಿಯ ಬಾನು ನನಗೆ ಪರಿಚಯ ಇರುತ್ತಾರೆ ಎಂರೆ ಸಾಕ್ಷಿ ಪರಿಚಯ ಇರುವುದಿಲ್ಲ ಆದರೆ ಗೋತ್ತು ಎಂದು ಹೇಳುತ್ತಾರೆ **.** ಆರೋಪಿಯ ಫೋನ್ ಪೇ ಖಾತೆಗೆ ತನ್ನ ಹೆಂಡತಿ

ಗೋಸಿಯ ಬಾನು ಅವರ ಅಕೌಂಟ್ ಇರುತ್ತದೆ ಎಂದರೆ ಸರಿ. ಸದರಿ ಗೋಸಿಯ ಬಾನು ಅವರ ಖಾತೆಯಿಂದ ಆರೋಪಿಯು ನನ್ನ ಖಾತೆಗೆ ಹಣವನ್ನು ಜಮೆ ಮಾಡಿರುತ್ತಾರೆ ಎಂದರೆ ಸಾಕ್ಷಿ ಈ ವ್ಯವಹಾರಕ್ಕಿಂತ ಮುಂಚೆ ಎರಡು ಬಾರಿ ಹಾಕಿರುತ್ತಾರೆ . ಎರಡು ಬಾರಿ ಹಾಕಿರುವುದಿಲ್ಲ ಒಟ್ಟು ಮೂರು ಬಾರಿ ಹಾಕಿರುತ್ತಾರೆ ಎಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ . ದಿಃ **21.08.2024** ರಂದು ಆರೋಪಿಯ ಹೆಂಡತಿ ಗೋಸಿಯ ಬಾನು ಅವರ ಖಾತೆಯಿಂದ ಆರೋಪಿಯ ಪೋನ್ ಪೇಯ ಕೆನರಾ ಬ್ಯಾಂಕ್ ಖಾತೆಗೆ **49** ಸಾವಿರ ಹಣವನ್ನು ಜಮೆ ಮಾಡಿರುತ್ತಾರೆ ಎಂದರೆ ಸರಿ. ಅದೇ ದಿನ 1 ಸಾವಿರ ಹಣವನ್ನು ಜಮೆ ಮಾಡುತ್ತಾರೆ ಎಂದರೆ ಸರಿ. ದಿಃ 18.10.2024 ರಂದು ರೂ.45,400 ರೂಪಾಯಿಗಳನ್ನು ಜಮೆ ಮಾಡುತ್ತಾರೆ ಎಂದರೆ ಸರಿ. ಸಾಕ್ಷಿಗೆ ಈಗ ಆರೋಪಿ ಹೆಂಡತಿ ಗೌಸಿಯ ಬಾನು ಅವರ ಬ್ಯಾಂಕ್ ಸ್ಟೇಟ್ ಮೆಂಟ್ ಅನ್ನು ತೋರಿಸಿಸಾಕ್ಷಿ ಒಪ್ಪಿದ ಮೇರೆಗೆ ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ಸಾಮಾನ್ಯವಾಗಿ ನಾನು ಬೇರೆಯವರಿಗೆ ಸಾಲ ನೀಡಿದಾಗ ಭದ್ರತೆಗಾಗಿ ಖಾಲಿ ಚೆಕ್ ಅನ್ನು ಪಡೆದುಕೊಳ್ಳುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿಯನ್ನು ಬಿಟ್ಟು ಬೇರೆಯವರಿಗೆ ಸಾಲವನ್ನು ನೀಡಿರುತ್ತೀರ ಎಂದರೆ ವಿಶ್ವಾಸಕ್ಕೆ ನೀಡಿರುತ್ತೇನೆ ಎಂದು ಹೇಳುತ್ತಾರೆ . ನಾನು ಅವರಿಂದಲೂ ಸಹ ಭದ್ರತೆಗೆಗಾಗಿ ಖಾಲಿ ಚೆಕ್ ಮತ್ತು ಪ್ರಾಮಿಸರಿ ನೋಟ್ ಗಳನ್ನು ಪಡೆದಿರುತ್ತೇನೆ ಎಂದರೆ ಸರಿ. ಸಾಮಾನ್ಯವಾಗಿ ನಾನು ಒಬ್ಬ ವ್ಯಕ್ತಿಗೆ ಸಾಲ ನೀಡಿದ್ದಲ್ಲಿ ಸದರಿ ವ್ಯಕ್ತಿಯು ಸಾಲದ ಹಣವನ್ನು ಪೂರ ವಾಪಸ್ ಮಾಡಿದ ನಂತರವೇ ಪುನಃ ಸದರಿ ವ್ಯಕ್ತಿಗೆ ಸಾಲ ನೀಡುತ್ತೇನೆ ಎಂದರೆ ಸರಿ. ನಾನು ಆರೋಪಿಗೆ 50 ಸಾವಿರ ಹಣ ಸಾಲ ನೀಡಿದಾಗ ಭದ್ರತೆಗಾಗಿ ಎಷ್ಟು ಚೆಕ್ ಗಳನ್ನು ಪಡೆದುಕೊಂಡಿರುತ್ತೀರ ಎಂದರೆ ಸಾಕ್ಷಿ ನಾನು ಆರೋಪಿ ದಿಃ 19.10.2024 ರಂದು 1 ಲಕ್ಷ ಹಣವನ್ನು ನೀಡಿ , 1 ಚೆಕ್ ಅನ್ನು ಪಡೆದಿರುತ್ತೇನೆ ಎಂದು ಹೇಳುತ್ತಾರೆ. ನಾನು ಜುಲೈ 2024 ರಲ್ಲಿ ಕೇವಲ 50 ಸಾವಿರ ಹಣವನ್ನು ಆರೋಪಿ ಗೆ ನೀಡಿರುತ್ತೇನೆ ಹೋರತು ದಿಃ 19.10.2024 ರಂದು ಯಾವುದೇ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ 50 ಸಾವಿರ ಸಾಲದ ಭದ್ರತೆಗೆ ಆರೋಪಿಯಿಂದ ನಿಪಿ 1 ಖಾಲಿ ಚೆಕ್ ಅನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಸಂಬಂದಿಸಿದ ಹಾಗೆ ಜಮೀನು ಇರುತ್ತದೆ ಅದರ ಕಟ್ಟಿಗೆ ಹಳ್ಳಿ ಗ್ರಾಮದ ಸರ್ವೆ ನಂಬರ್ 41/1 ಮತ್ತು 41/8 ಇರುತ್ತದೆ . ಸದರಿ ಜಮೀನು ನಮ್ಮ ಕುಟುಂಬದವರ ಹೆಸರಿಗೆ

ಇರುವುದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನಿಗೆ ಸಂಬಂದಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ . ನಾನು ANY ONE BANK ಸೇವಾ ಕೇಂದ್ರವನ್ನು ಜಗಳೂರಿನಲ್ಲಿ ಸ್ಥಾಪನ ಮಾಡಿದ ಸಂಬಂದವಾಗಿ ದಾಖಲೆಗಳನ್ನು ಹಾಜರುಪಡಿಸುತ್ತೇನೆ . ನನಗೆ ಈಗ ಆರೋಪಿಯು ಸುಮಾರು 98 ಸಾವಿರ ಹಣವನ್ನು ನನ್ನ ಖಾತೆಗೆ ಜಮ ಮಾಡಿದ್ದರು ಸಹ ಹೆಚ್ಚಿನ ದುರ್ಲಾಬ ಮಾಡಲು ಆರೋಪಿಯ ನಿಪಿ 1 ಖಾಲಿ ಚೆಕ್ ಅನ್ನು ದುರುಪಯೋಗ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ನಿಪಿ 1 ಚೆಕ್ ಬಿಟ್ಟು ನನ್ನ ಮತ್ತು ಆರೋಪಿ ನಡುವೆ ಆದ ವ್ಯವಹಾರದ ಬಗ್ಗ ಯಾವುದೇ ದಾಖಲೆ ಇರುವುದಿಲ್ಲ . ನಾನು ನಿಪಿ 1 ಖಾಲಿ ಚೆಕ್ ನಲ್ಲಿ 1 ಲಕ್ಷ ತುಂಬಿಸಿಕೊಂಡು ನನ್ನ ಖಾತೆಗೆ ಜಮೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿ ನಡುವೆ ಕೇವಲ ಒಂದು ಬಾರಿ ಹಣದ ವ್ಯವಹಾರ ನಡೆದಿರುತ್ತದೆ ಎಂದರೆ ಸಾಕ್ಷಿ ಹಲವಾರು ಬಾರಿ ನಡೆದಿರುತ್ತದೆ ಎಂದು ಹೇಳುತ್ತರೆ . ಕೇವಲ ಒಂದು ಬಾರಿ ವ್ಯವಹಾರ ನಡೆದರು ಸಹ ಈ ಪ್ರಕಣಕ್ಕೆ ತೊಂದರೆ ಆಗುತ್ತದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು